ನೀಡಿ ಹತ್ತು ವರ್ಷಗಳ ಸೇವೆಸಲ್ಲಿಸಿದ ನೌಕರರಿಗೆ ನಿಯತಕಾಲಿಕ ಸೇವೆಗೆ ನಿಯಮಾನುಗೊಳಿಸಲಾಗಿದೆ. ದಿನಾಂಕ 01-01-86 ರಿಂದ 21-02-86ವರೆಗೆ ನೇಮಕಗೊಂಡ ನೌಕರರನ್ನು ಉಚ್ಚ ನ್ಯಾಯಾಲಯದ ಆದೇಶದ ಮೇರೆಗೆ ಕಾಲಿಕ ವೇತನದಲ್ಲಿ ಮುಂದುವರಿಸಲಾಗುತ್ತಿದೆ.

ಅ)ಇ)ಈ) ಈ ಪಶ್ನೆ ಉದ್ಭವಿಸುವುದಿಲ್ಲ

ಪುನರ್ವಸತಿ ಕೇಂದ್ರಗಳಲ್ಲಿ ಸಣ್ಣ ಕೈಗಾರಿಕೆ ಸ್ಥಾಪನೆ

790 (1058) ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನಬಾಗೇವಾಡಿ) : ಮಾನ್ಯ ಸಣ್ಣ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಸವನಬಾಗೇವಾಡಿ ಮತಕ್ಷೇತ್ರದ ಮುಳುಗಡೆ ಪ್ರದೇಶದ ವ್ಯಾಪ್ತಿಯ ಪುನರ್ ವಸತಿ ಕೇಂದ್ರಗಳಲ್ಲಿ ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಲು ಸರ್ಕಾರ ಆಲೋಚಿಸಿದೆಯೆ?

ಆ) ಹಾಗಿದ್ದಲ್ಲಿ, ಈ ಕೈಗಾರಿಕಾ ಘಟಕಗಳನ್ನು ಯಾವ ಯಾವ ಪುನರ್ವಸತಿ ಕೇಂದ್ರಗಳಲ್ಲಿ ಸ್ಥಾಪಿಸಲಾಗುವುದು ಸತ್ತು ಯಾವ ಕೈಗಾರಿಕಾ ಘಟಕಗಳನ್ನು ಸ್ಥಾಪಿಸಲು ನಿರ್ಧರಿಸಲಾಗಿದೆ; ವಿವರ ನೀಡುವುದು?

ಇ) ಈ ಘಟಕಗಳನ್ನು ಎಂದಿನಿಂದ ಪ್ರಾರಂಭಿಸಲಾಗುವುದು?

ಶ್ರೀ ಎಸ್. ಆರ್. ಕಾಶಪ್ಪನವರ್ (ಸಣ್ಣ ಕೈಗಾರಿಕಾ ಸಚಿವರು) :

ಅ) ಆದರೂ ಇಲ್ಲ

ಆ) ಮುಂಬರುವ ಐದು ವರ್ಷಗಳಲ್ಲಿ ಬಸವನ ಬಾಗೇವಾಡಿ ಕ್ಷೇತ್ರದ ಈ ಕೆಳಕಂಡ ಪುನರ್ವಸತಿ ಕೇಂದ್ರಗಳಲ್ಲಿ (1)ಕೋಲಾರ (2) ಬಳೂತಿ (3) ಸಿದ್ದನಾಥ (4) ಚಿಮ್ಮಲಗಿ (5) ಬೇನಾಳ (6) ನಿಡುಗುಂದಿ ವಿವರಗಳು ಕೆಳಗಿನಂತಿದೆ

ಸಣ್ಣ ಪ್ರಮಾಣದ ರವಾ ಮಿಲ್, ಗೋಣಿಚೀಲ ತಯಾರಿಕೆ, ಹಾಟ್‌ಮಿಕ್ಸ್ ಪ್ಲಾಂಟ್, ಬೇಕರಿ, ಚುರುಮರಿ, ಬಟ್ಟೆ, ಸೋಡಾ ವಾಟರ್ ತಯಾರಿಕೆ ಇಟ್ಟಂಗಿ ತಯಾರಿಕೆ ಕೃಷಿ ಹಾಗೂ ಕಟ್ಟಿಗೆಯ ಪೀಠೋಪಕರಣಗಳ ತಯಾರಿಕೆ.

ಇ) ಘಟಕಗಳು ಮುಂದಿನ 1 ರಿಂದ 2 ವರ್ಷದೊಳಗಿನ ಅವಧಿಯಲ್ಲಿ ಪ್ರಾರಂಭಿಸುವ ಸಾಧ್ಯತೆ ಇರುತ್ತದೆ.

ವಸತಿ ಶಾಲೆಗಳ ಬಗ್ಗೆ

791 (840) ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಈವರೆಗೆ ಪ್ರಾರಂಭಿಸಿರುವ ಮೊರಾರ್ಜಿ ವಸತಿ ಶಾಲೆಗಳೆಷ್ಟು; (ಜಿಲ್ಲಾವಾರು ವಿವರ ನೀಡುವುದು)